
# 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

## ಪದ್ಯಭಾಗ







**ಪರಿಕಲ್ಪನೆ ಮತ್ತು ಸಂಯೋಜನೆ**

**********************

ಬಸವರಾಜ.ಟಿ.ಎಂ

ಕನ್ನಡ ಭಾಷಾ ಶಿಕ್ಷಕರು


ಸರ್ಕಾರಿ ಪ್ರೌಢಶಾಲೆ,ರೂಪನಗುಡಿ

ಬಳ್ಳಾರಿ ಪೂರ್ವ ವಲಯ

*******************************************************

## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ–1 ಎಮ್ಮನುಡಿಗೇಳ್




**ಪಂಪ**

**ಕವಿ ಹೆಸರು** : ಆದಿ ಮಹಾಕವಿ ಪಂಪ

**ಕಾಲ** : ಕ್ರಿ.ಶ. ಸುಮಾರು 941

**ಸ್ಥಳ** : ಆಂದ್ರಪ್ರದೇಶದ ವೆಂಗಿಮಂಡಲದ ವೆಂಗಿಪೊಳು ಎಂಬ ಅಗ್ರಹಾರ

**ಕೃತಿಗಳು** : 'ವಿಕ್ರಮಾರ್ಜುನವಿಜಯ ' ಮತ್ತು ' ಆದಿಪುರಾಣ '


**ಬಿರುದುಗಳು** : **ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ**

**ಪಂಪ:** ಕನ್ನಡದ ಆದಿ ಮಹಾಕವಿ ಪಂಪನು ಕ್ರಿ.ಶ. ಸುಮಾರು 941 ರಲ್ಲಿ ಆಂದ್ರಪ್ರದೇಶದ ವೆಂಗಿಮಂಡಲದ ವೆಂಗಿಪೊಳು ಎಂಬ ಅಗ್ರಹಾರದಲ್ಲಿ ಜನಿಸಿದರು. ಪಂಪನು 'ವಿಕ್ರಮಾರ್ಜುನವಿಜಯ ' ' ಮತ್ತು ಆದಿಪುರಾಣ ' ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳು ಇದ್ದವು. ಈತನು ಅರಿಕೇಸರಿ ಎಂಬ ರಾಜನ ಆಶ್ರಯದಲ್ಲಿದ್ದನು.



# 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

## ಪದ್ಯಪಾಠ–2 ಹಕ್ಕಿ ಹಾರುತ್ತಿದೆ ನೋಡಿದಿರಾ



ದ.ರಾ. ಬೇಂದ್ರೆ

**ಕವಿ ಹೆಸರು** : ದ.ರಾ.ಬೇಂದ್ರೆ

**ಕಾಲ** : ಕ್ರಿ.ಶ.1896

**ಸ್ಥಳ** : ಧಾರವಾಡ

**ಕೃತಿಗಳು** : ಗರಿ , ನಾದಲೀಲೆ, ನಾಕುತಂತಿ, ಗಂಗಾವತರಣ, ಸಖಿಗೀತ, ಅರಳು–ಮರಳು

**ಪ್ರಶಸ್ತಿಗಳು** : ಭಾರತೀಯ ಜ್ಞಾನಪೀಠ ಪ್ರಶಸ್ತಿ , ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ , ಪದ್ಮಶ್ರೀ ಪ್ರಶಸ್ತಿ , ಇತ್ಯಾದಿ

**ದ.ರಾ.ಬೇಂದ್ರೆ** : ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ದರಾದ ಶ್ರೀದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಕ್ರಿ.ಶ.1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರು **ಗರಿ, ನಾಕುತಂತಿ, ಗಂಗಾವತರಣ, ಸಖಿಗೀತ, ನಾದಲೀಲೆ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.** ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ನಾಕುತಂತಿ ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಮತ್ತು ಅರಳು–ಮರಳು ಕವನಸಂಕಲಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಇವರು 1943ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೇಯ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ–4 – ವಚನ ಸೌರಭ



ಜೇಡರ ದಾಸಿಮಯ್ಯ

**ಕವಿ ಹೆಸರು : ಜೇಡರ ದಾಸಿಮಯ್ಯ**











**ಕಾಲ : ಕ್ರಿ.ಶ. ಸುಮಾರು 1150**

**ಸ್ಥಳ : ಯಾದಗಿರಿ ಸನಿಹದ ಮುದೇನೂರು**

**ಸಾಹಿತ್ಯ : ವಚನಗಳು**


**ಅಂಕಿತನಾಮ : ರಾಮನಾಥ**

**ಜೇಡರ ದಾಸಿಮಯ್ಯ : ಶಿವಶರಣ ಜೇಡರ ದಾಸಿಮಯ್ಯ ಅವರು ಕ್ರಿ.ಶ. ಸುಮಾರು 1150ರಲ್ಲಿ ಯಾದಗಿರಿ ಸನಿಹದ ಮುದೇನೂರಿನಲ್ಲಿ ಜೀವಿಸಿದ್ದರು. ಆದ್ಯವಚನಕಾರ ಎಂದು ಪ್ರಸಿದ್ಧರಾದ ಇವರ ಸುಮಾರು 150 ವಚನಗಳು ದೊರೆತಿವೆ. 'ರಾಮನಾಥ, ಎಂಬುದು ಇವರ ಅಂಕಿತನಾಮ. ಸರಳ ಮತ್ತು ನೇರ ನಿರೂಪಣೆಯಿಂದ ಕೂಡಿರುವ ಇವರ ವಚನಗಳು ಸಾಮಾಜಿಕ ಮೌಲ್ಯಗಳಿಂದ ಜನಮಾನ್ಯವಾಗಿವೆ.**

## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ–4 – ವಚನ ಸೌರಭ



ಬಸವಣ್ಣ

ಕವಿ ಹೆಸರು : ಬಸವಣ್ಣ









ಕಾಲ : ಕ್ರಿ.ಶ. 1260 ( 12ನೇ ಶತಮಾನ)

ಸ್ಥಳ : ಬಿಜಾಪುರ ಜಿಲ್ಲೆಯ ಬಾಗೇವಾಡಿ

ಸಾಹಿತ್ಯ : ವಚನಗಳು


ಅಂಕಿತನಾಮ : ' ಕೂಡಲ ಸಂಗಮದೇವ '

**ಶಿವಶರಣ ಬಸವಣ್ಣ** : ಶಿವಶರಣ ಬಸವಣ್ಣ ಅವರು ಕ್ರಿ.ಶ. 1260ರಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದವರು. ಇವರು ಕಳಚುರಿ ವಂಶದ ಬಿಜ್ಜಳನ ಆಸ್ಥಾನದಲ್ಲಿ ಮಹಾ ಭಂಡಾರಿಯಾಗಿ ಸೇವೆಸಲ್ಲಿಸಿದ್ದಾರೆ. ಇವರು ಪ್ರಸಿದ್ದ ವಚನಕಾರರು ಮತ್ತು ಸಮಾಜಸುಧಾರಕರಾಗಿದ್ದರು. **'ಕೂಡಲ ಸಂಗಮದೇವ'** ಎಂಬ ಅಂಕಿತನಾಮದಿಂದ ರಚಿಸಿರುವ ಸಾವಿರಾರು ವಚನಗಳು ದೊರೆತಿವೆ. ಇವರ ಸರಳವಾದ **ಭಾವಗೀತಾತ್ಮಕವಾದ** ವಚನಗಳಲ್ಲಿ ಸಾಮಾಜಿಕ, ನೈತಿಕ ವಿಚಾರಧಾರೆಗಳನ್ನು ಸಾದರಪಡಿಸಲಾಗಿದೆ.

## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ-5 – ಸಂಕಲ್ಪ ಗೀತೆ



ಜಿ.ಎಸ್.ಶಿವರುದ್ರಪ್ಪ

**ಕವಿ ಹೆಸರು** : ಜಿ.ಎಸ್. ಶಿವರುದ್ರಪ್ಪ

**ಕಾಲ** : ಕ್ರಿ.ಶ. 1926

**ಸ್ಥಳ** : ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ

**ಕೃತಿಗಳು** : 'ಎದೆತುಂಬಿ ಹಾಡಿದೆನು, ಸಾಮಗಾನ, ಚಲವು-ಒಲವು, ದೀಪದ ಹೆಜ್ಜೆ, ದೇವಶಿಲ್ಪಿ, ಅನಾವರಣ, ಮಾಸ್ಕೋದಲ್ಲಿ 22ದಿನಗಳು , ಸೌಂದರ್ಯಸಮೀಕ್ಷೆ


**ಪ್ರಶಸ್ತಿಗಳು** : ರಾಷ್ಟ್ರಕವಿ ಪ್ರಶಸ್ತಿ, ನಾಡೋಜ ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ , ಇತ್ಯಾದಿ

ಶ್ರೀ ಜಿ.ಎಸ್. ಶಿವರುದ್ರಪ್ಪ ಎಂದೇ ಪ್ರಸಿದ್ಧರಗಿರುವ ಗುಗ್ಗರಿಶಾಂತವೀರಪ್ಪ ಶಿವರುದ್ರಪ್ಪ. ಅವರು ಕ್ರಿ.ಶ. 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದವರು. ಇವರು 'ಎದೆತುಂಬಿ ಹಾಡಿದೆನು, ಸಾಮಗಾನ, ಚಲವು-ಒಲವು, ದೀಪದ ಹೆಜ್ಜೆ, ದೇವಶಿಲ್ಪಿ, ಅನಾವರಣ, ಮಾಸ್ಕೋದಲ್ಲಿ 22ದಿನಗಳು ಸೌಂದರ್ಯಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ರಾಷ್ಟ್ರಕವಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕಾವ್ಯಾರ್ಥಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ. ಇವರು 1992ರಲ್ಲಿ ದಾವಣಗೆರೆಯಲ್ಲಿ ನಡೆದ 61ನೇಯ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ದಿನಾಂಕ 23/12/2013ರಂದು ದೈವದೀನರಾದರು.



## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ-6 – ಕೌರವೇಂದ್ರನ ಕೊಂದೆ ನೀನು




ಕುಮಾರವ್ಯಾಸ

ಕವಿ ಹೆಸರು : ಕುಮಾರವ್ಯಾಸ

ಮೂಲ ಹೆಸರು : ನಾರಾಯಣಪ್ಪ

ಕಾಲ : ಕ್ರಿ.ಶ. ಸುಮಾರು 1430


ಸ್ಥಳ : ಗದಗ ಪ್ರಾಂತ್ಯದ ಕೋಳಿವಾಡ

ಕೃತಿಗಳು : ಕರ್ನಾಟ ಭಾರತ ಕಥಾಮಂಜರಿ

ಬಿರುದುಗಳು : ರೂಪಕ ಸಾಮ್ರಾಜ್ಯ ಚಕ್ರವರ್ತಿ


.

ಕುಮಾರವ್ಯಾಸ ಎಂದು ಪ್ರಸಿದ್ಧನಾಗಿರುವ ಗದುಗಿನ ನಾರಾಯಣಪ್ಪನವರು ಕ್ರಿ.ಶ. ಸುಮಾರು 1430ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಜನಿಸಿದರು. ಆದಿಕವಿ ಪಂಪನ ನಂತರ ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ರಚಿಸಿ ಪಂಡಿತರಿಗೆ ಮಾತ್ರಾವಲ್ಲದೇ, ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಪಾತ್ರನಾದ ಕುಮಾರವ್ಯಾಸ. ಕನ್ನಡಭಾರತ , ಗದುಗಿನ ಭಾರತ, ಕುಮಾರವ್ಯಾಸಭಾರತ ಎಂಬ ಹೆಸರನ್ನು ಹೊಂದಿರುವ ಇವರು ಕರ್ನಾಟಭಾರತಕಥಾಮಂಜರಿ ಎಂಬ ಕಾವ್ಯವನ್ನು ಬರೆದು ಖ್ಯಾತರಾಗಿದ್ದಾರೆ. ಮತ್ತು ಐರಾವತ ಎಂಬ ಕೃತಿಗಳನ್ನು ರಚಿಸಿದ್ದಾರೆಂದು ತಿಳಿದುಬಂದಿದೆ. ಶ್ರೀಯುತರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ.




## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ; 7 – ವೀರಲವ

| | |
|---|---|
|  ಲಕ್ಷ್ಮೀಶ | ಕವಿ ಹೆಸರು : ಲಕ್ಷ್ಮೀಶ<br>ಕಾಲ : ಕ್ರಿ.ಶ. ಸುಮಾರು 1550<br>ಸ್ಥಳ : ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರು<br>ಕೃತಿಗಳು : ಜೈಮಿನಿ ಭಾರತ<br>ಬಿರುದುಗಳು : ಉಪಮಾಲೋಲ, ಕರ್ಣಾಟ ಕವಿಚೂತಾವನ ಚೈತ್ರ |

ಕವಿ ಲಕ್ಷ್ಮೀಶನು ಕ್ರಿ.ಶ. ಸುಮಾರು 1550 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿನಲ್ಲಿ ಜನಿಸಿದವರು. ಇವರಿಗೆ ಲಕ್ಷ್ಮಿರಮಣ, ಲಕ್ಷ್ಮಿಪತಿ ಎಂಬ ಹೆಸರುಗಳೂ ಇದ್ದವು. ಇವರು ಜೈಮಿನಿ ಭಾರತ ಎಂಬ ಪ್ರಸಿದ್ದ ಕಾವ್ಯವನ್ನು ರಚಿಸಿದ್ದಾರೆ. ಈತನಿಗೆ ಉಪಮಾಲೋಲ, ಕರ್ಣಾಟ ಕವಿಚೂತಾವನ ಚೈತ್ರ., ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.



## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

### ಪದ್ಯಪಾಠ– 8 – ಸಾರ್ಥಕತೆ (ಸಂಕಟಕೆ ಗಡಿ ಇಲ್ಲ )



ದು. ಸರಸ್ವತಿ

ಕವಿ ಹೆಸರು : ದು. ಸರಸ್ವತಿ

ಕಾಲ : ಕ್ರಿ. ಶ. 1963

ಸ್ಥಳ : ಬೆಂಗಳೂರು

ಕೃತಿಗಳು : ಹೆಣೆದರೆ ಜೇಡನಂತೆ , ಜೀವಸಂಪಿಗೆ , ಈಗೇನ್ಮಾಡೀರಿ?

ದು. ಸರಸ್ವತಿ : ಶ್ರೀಮತಿ ದುರ್ಗಪ್ಪ ಸರಸ್ವತಿ ಅವರು ಕ್ರಿ. ಶ. 1963ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಮೂಲತಹ ಬಳ್ಳಾರಿಯವರು. ಇವರು ದಲಿತ ಸಾಹಿತ್ಯ ಚಳವಳಿಯ ಪ್ರಮುಖ ಕವಯಿತ್ರಿ. ಹೆಣೆದರೆ ಜೇಡನಂತೆ, ಜೀವಸಂಪಿಗೆ, ಈಗೇನ್ಮಾಡೀರಿ? ಎಂಬ ಅನುಭವ ಕಥನವನ್ನು ಪ್ರಕಟಿಸಿದ್ದಾರೆ ಇವರು ರಂಗಕಲಾವಿದರಾಗಿ ಸಮಾಜ ಸೇವಾಕರ್ತರಾಗಿ ದುಡಿಯುತ್ತಿದ್ದಾರೆ.











## 10ನೇತರಗತಿ ಪ್ರಥಮ ಭಾಷೆ ಕನ್ನಡ, ಕವಿ ಪರಿಚಯ

## ಪದ್ಯಪಾಠ– 8 – ಸಾರ್ಥಕತೆ (ನನ್ನಾಸೆ)



ಇಂದುಮತಿ ಲಮಾಣಿ

ಕವಿ ಹೆಸರು : ಇಂದುಮತಿ ಲಮಾಣಿ

ಕಾಲ : ಕ್ರಿ. ಶ. 1959

ಸ್ಥಳ : ವಿಜಯಾಪುರ ಜಿಲ್ಲೆ ಬರಟಗಿಯ ಮೂರನೇ ತಾಂಡಾ

ಕೃತಿಗಳು : ತಾಯಿಲೋಕ' ಮತ್ತು 'ನನ್ನ ಸುತ್ತಲಿನ ಸತ್ಯಗಳು' 'ಭಾವಲೋಕ' 'ಏಕಾದಶ'

ಇಂದುಮತಿ ಲಮಾಣಿ ಅವರು 1959ರಲ್ಲಿ ವಿಜಯಾಪುರ ಜಿಲ್ಲೆ ಬರಟಗಿಯ ಮೂರನೇ ತಾಂಡಾದಲ್ಲಿ ಜನಿಸಿದರು.ದಲಿತಸಾಹಿತ್ಯ ಪ್ರಕಾರದ ಪ್ರಮುಖ ಕವಯಿತ್ರಿ. ಇವರು ಬಂಜಾರಸೇವಾಸಂಘ. ಮಹಿಳಾಸ್ನೇಹಸಾಹಿತ್ಯಸಂಗಮ ಸಂಘದ ಅಧ್ಯಕ್ಷರಾಗಿಯೂ ಸೇವೆಸಲ್ಲಿಸುತ್ತಿದ್ದಾರೆ. ಇವರು 'ತಾಯಿಲೋಕ' ಮತ್ತು 'ನನ್ನ ಸುತ್ತಲಿನ ಸತ್ಯಗಳು' (ಕವನಸಂಕಲನ), 'ಭಾವಲೋಕ'(ಜನಪದ ಕವನಸಂಕಲನ), 'ಏಕಾದಶ' (ಕಥಾಸಂಕಲನ), 'ಕೊರಡು ಕೊನರುವುದು ಬರಡುಹಯನಹುದು'(ಕಾದಂಬರಿ) ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿ ಪ್ರಸಿದ್ದರಾಗಿದ್ದಾರೆ.



ಕಲಿಯಿರಿ ಕಲಿಸಿರಿ

ಶುಭವಾಗಲಿ